3) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ಕುಣಿಗಲ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಎಸ್.ಪಿ. ಮುದ್ದಹನುಮೇ ಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ಕುಣಿಗಲ್ ಪಟ್ಟಣದಲ್ಲಿ ಸುಮಾರು 25-30 ಸಾವಿರ ಜನಸಂಖ್ಯೆ ಇರುವಂಥಾದ್ದು. ಇಲ್ಲಿ ತೀವ್ರವಾದಂತಹ ಕುಡಿಯುವ ನೀರಿನ ಸಮಸ್ಯೆ ಇದೆ. ಇದರ ಬಗ್ಗೆ ಸರ್ಕಾರಕ್ಕೆ ಅನೇಕ ಸಲ ಒತ್ತಾಯ ಮಾಡಿದ್ದೇನೆ. ಈಗ ಸರ್ಕಾರದ ಮುಂದೆ 1 ಕೋಟಿ 80 ಲಕ್ಷ ರೂಪಾಯಿಗಳ ಪ್ರಸ್ತಾವನೆ ಕುಡಿಯುವ ನೀರಿನ ಯೋಜನೆಗೆ ಇದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಾನು ಒತ್ತಾಯ ಮಾಡುವುದೆನೆಂದರೆ ಈ ವರ್ಷ ಕುಣಿಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ತಾವು ಈ ಯೋಜನೆಯನ್ನು ಈ ವರ್ಷ ಕೈಗೆತ್ತಿಕೊಂಡು ಪ್ರಾರಂಭ ಮಾಡುವಂತಹ ಯೋಚನೆ ಇದೆಯಾ? ಅದು ಇಲ್ಲದಿದ್ದರೆ ತಾವು ದಯಮಾಡಿ ಈ ವರ್ಷವೇ ಪ್ರಾರಂಭ ಮಾಡುವಂತಹ ದೊಡ್ಡ ಮನಸ್ಸು ಮಾಡಬೇಕೆಂದು ಕುಣಿಗಲ್ ಪಟ್ಟಣದ ನಾಗರಿಕರ ಪರವಾಗಿ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಅಧ್ಯಕ್ಷರು :— ಸೆಪ್ಟೆಂಬರ್ ಹೊತ್ತಿಗೆ ನೋಟಿಫಿಕೇಷನ್ ಇಶ್ಯೂ ಆಗುತ್ತದೆ, ಅದರ ಒಳಗೆ ಮಾಡಬೇಕು.

ಶ್ರೀ ಎಂ.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ತೀವ್ರವಾಗಿ ಗಮನಹರಿಸುತ್ತೇವೆ.

ಅಧ್ಯಕ್ಷರು :— ನಾನು ಇದರ ಬಗ್ಗೆ ತಮಗೆ ಸೆಟಲ್ ಮಾಡಿ ಕೊಡುತ್ತೇನೆ. ಕೇಂದ್ರ ಚುನಾವಣಾ ಆಯೋಗದವರು ಸೆಪ್ಟೆಂಬರ್ ತಿಂಗಳಲ್ಲಿ ನೋಟಿಫಿಕೇಷನ್ ಇಷ್ಯೂ ಮಾಡುತ್ತಾರೆ. ತಾವು ಜುಲೈ, ಆಗಸ್ಟ ತಿಂಗಳೊಳಗೆ ಈ ಕೆಲಸವನ್ನು ಮಾಡಿಕೊಡಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಆಯಿತು ಎಂದು ಹೇಳಬೇಕು.

ಅಧ್ಯಕ್ಷರು :— ಅವರು ನಮ್ಮ ಗೆಳೆಯರು ಜುಲೈ, ಆಗಸ್ಟ್ ತಿಂಗಳೊಳಗೆ ಮಾಡಿಕೊಡುವಂತಹ ಪ್ರಯತ್ನ ಮಾಡುತ್ತಾರೆ.

ಶ್ರೀ ಎಂ.ಎಸ್. ಪಾಟೀಲ್ :— ನಾನು ಈಗಾಗಲೇ ಹೇಳಿದ್ದೇನೆ. ಈಗ ಅವರು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾನು ತೀವ್ರವಾಗಿ ಗಮನಹರಿಸುತ್ತೇನೆಂದು ಹೇಳಿದ್ದೇನೆ. ಅವರಿಗೆ ಕೆಲಸ ಮಾಡಿಸಿ ಕೊಡುತ್ತೇನೆ.